ಚರ್ಚೆಮಾಡದ್ದೇನೆ. ತಾವು ಏನು ಆದೇಶವನ್ನು ಕೊಟ್ಟಿದ್ದೀರಿ, ಅದನ್ನು ನಾನು ನಿನ್ನೆಯೇ ಕಾರ್ಯಗತ ಮಾಡದ್ದೇನೆ. He is convinced about it. ಮಾನ್ಯ ಉಪನಾಯಕರು ಮತ್ತು ನಾಯಕರುಗಳು ಹೇಳಿರತಕ್ಕಂಥ ವಿಚಾರ ಏನಿದೆ, ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಗಮನ ಸೆಳೆಯುವ ಸೂಚನೆ

ವಿಷಯ:-ಹೇಮಾವತಿ ಜಲಾಶಯದಿಂದ ಶಿಂಶಾಕೊಳ್ಳಕ್ಕೆ ನೀರು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಅಧ್ಯಕ್ಷರೇ, ಹೇಮಾವತಿ ಜಲಾಶಯದಿಂದ ಶಿಂಶಾ ಕೊಳ್ಳಕ್ಕೆ ದಿನಾಂಕ 25.9.1994 ರಿಂದ ನೀರು ಬಿಡುವುದರ ಮೂಲಕ ತುಮಕೂರು ಜಿಲ್ಲೆಯ ನೊಣವಿನಕೆರೆ, ಮಲ್ಲಾಘಟ್ಟಕೆರೆ, ತುರುವೇಕೆರೆ, ಮಾರ್ಕೋನಹಳ್ಳಿ ಜಲಾಶಯ ಹಾಗೂ ಇತರ ಕೆರೆಗಳು ತುಂಬಿ ಸುಮಾರು ಐವತ್ತು ಸಾವಿರ ಎಕರೆ ಜಮೀನಿಗೆ ನೀರಾವರಿಯಾಗಿದ್ದು, ಈಗ ಸದರಿ ಶಿಂಷಾ ಕೊಳ್ಳಕ್ಕೆ ನೀರು ಬಿಡದೆ ಇರುವುದರಿಂದ ಆ ಭಾಗದ ರೈತರುಗಳಿಗೆ ಉಂಟಾಗಿರುವ ತೊಂದರೆಯ ಬಗ್ಗೆ ಮಾನ್ಯಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):-ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದಲು ತಮ್ಮ ಅಪ್ಪಣೆ ಕೋರುತ್ತೇನೆ. ದಿನಾಂಕ 25-9-1994 ರಲ್ಲಿ ಪ್ರಾಯೋಗಿಕವಾಗಿ ಬಾಗೂರು-ನವಿಲೆ ಸರಪಳಿ 15,700 ಮೀ. ನಿಂದ ವೈನಾಲೆಯ ಮುಖಾಂತರ ತುಮಕೂರು ಶಾಖಾ ನಾಲೆಯ 0 ಕಿ.ಮೀ.ನಿಂದ 30 ನೇ ಕಿ.ಮೀ.ವರೆಗೆ ಹಾಗೂ ನಾಗಮಂಗಲ ಶಾಖಾ ನಾಲೆಯ 0 ಕಿ.ಮೀ.ನಿಂದ 15ನೇ ಕಿ.ಮೀ.ವರೆಗೆ ನೀರನ್ನು ಬಿಟ್ಟಿದ್ದು, ಈ ನೀರು ಎಸ್ಕೇಪ್ ಮುಖಾಂತರ ಹರಿದು ಗಂಗನಘಟ್ಟ, ಮಲ್ಲಾಘಟ್ಟ, ನೊಣವಿನಕೆರೆ ಮತ್ತು ತುರುವೇಕೆರೆ ಕೆರೆಗಳ ಮುಖಾಂತರ ಶಿಂಶಾ ಕೊಳ್ಳದ ಮುಖಾಂತರಮಾರ್ಕೋನಹಳ್ಳಿ ಜಲಾಶಯವನ್ನು ಸೇರಿತು. ಹೇಮಾವತಿ ಜಲಾಶಯ ಯೋಜನೆಯಲ್ಲಿ ಕೆರೆಗಳಿಗೆ ನೀರನ್ನು ಬಿಡಲು ಯಾವುದೇ ಅವಕಾಶವಿರುವುದಿಲ್ಲ. ಹೀಗಾಗಿ ದಿನಾಂಕ 25-9-1994ರಲ್ಲಿ ಪ್ರಾಯೋಗಿಕವಾಗಿ ಬಿಟ್ಟ ನೀರು ಮಾತ್ರ ಶಿಂಶಾ ಕೊಳ್ಳಕ್ಕೆ ಎಸ್ಕೇಪ್ ಮುಖಾಂತರ ಹರಿದಿರುತ್ತದೆ. ದಿನಾಂಕ 25-8-1994 ರಲ್ಲಿ ಹೇಮಾವತಿ ಜಲಾಶಯದ ನೀರಿನ ಮಟ್ಟವು 2920.27 ಅಡಿಗಳಿದ್ದು (ನೀರಿನ ಪ್ರಮಾಣವು 31.05 ಟಿ.ಎಂ.ಸಿ) ಜಲಾಶಯವು ತುಂಬಿದ್ದು, ಈ ವರ್ಷ ದಿನಾಂಕ 25-8-1995ರಲ್ಲಿ ಜಲಾಶಯದ ನೀರಿನ ಮಟ್ಟ ಕೇವಲ 2909.02 ಅಡಿಗಳಿರುತ್ತದೆ. (ನೀರಿನ ಪ್ರಮಾಣವು 21.58 ಟಿ.ಎಂ.ಸಿ). ಹೀಗಾಗಿ ಹೋದ ವರ್ಷಕ್ಕಿಂತ ಈ ವರ್ಷ ಜಲಾಶಯದಲ್ಲಿನ ನೀರಿನ ಮಟ್ಟವು ಸುಮಾರು 11.25 ಅಡಿ ಕಡಿಮೆ ಇದ್ದು, 9.5 ಟಿ.ಎಂ.ಸಿ. ಕಡಿಮೆ ಇರುತ್ತದೆ. ಈ ವರ್ಷವೂ ಜಲಾಶಯಕ್ಕೆ ಸಾಕಷ್ಟು ನೀರು ಬಂದಲ್ಲಿ ಅಧಿಕ ನೀರನ್ನು ತಾತ್ಕಾಲಿಕವಾಗಿ ಮೇಲೆ ಕಂಡ ಕೆರೆಗಳಿಗೆ ಬಿಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತದೆ. ಇದು ಹಳೆಯ ಸ್ಟೇಟ್‌ಮೆಂಟ್. ನಿನ್ನೆ ಅವರೆಲ್ಲ ಬಂದು ನನ್ನನ್ನು ಭೆಟ್ಟಿ ಮಾಡಿದ್ದರು. ಜಲಾಶಯ ತುಂಬಿ ಹರಿಯುತ್ತಿದೆ. ನಾಲ್ಕು ದಿವಸಗಳಲ್ಲಿ ಪರಿಸ್ಥಿತಿ ಬದಲಾವಣೆಯಾಗಿದೆ. ಕೆ.ಆರ್.ಎಸ್.ನಿಂದ 35 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ. ಹೇಮಾವತಿಯಿಂದ 20 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ ಮತ್ತು ಕಬಿನಿಯಿಂದ 38 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡುತ್ತಿದ್ದೇವೆ. ಎಲ್ಲ ರಿಸರ್ವಾಯರ್‌ಗಳಲ್ಲಿ ಒಂದು ಅಡಿ ಕುಶನ್‌ಬಿಟ್ಟು ಬಾಕಿ ಎಲ್ಲ ನೀರನ್ನು ಹಿಡಿದಿಟ್ಟಿದ್ದೇವೆ. ಮುಂದೆ ಎಲ್ಲ ಆಚ್ಚುಕಟ್ಟು ಡೆವಲಪ್ ಆದ ಮೇಲೆ ಕೆರೆಗಳನ್ನು ತುಂಬಿಸತಕ್ಕಂಥ ಒಂದು ಕಾರ್ಯಕ್ರಮ ಈ ಯೋಜನೆಯ ಅಡಿಯಲ್ಲಿ ಬರದೇ ಇದ್ದರೂ ಕೂಡ ಶ್ರೀಮಾನ್ ವೀರಪ್ಪ ಮೊಯಿಲಿಯವರು

ಮುಖ್ಯಮಂತ್ರಿಗಳಾಗಿದ್ದಾಗ ಕನಿಷ್ಟ ಪ್ರಮಾಣದಲ್ಲಿ ಆ ಕೆರೆಗಳಲ್ಲಿ ನೀರು ಬಿಟ್ಟರೆ ಕೆಲವು ಕೆರೆಗಳು ತುಂಬಿಕೊಂಡು ತಾತ್ಕಾಲಿಕವಾಗಿ ಬೆಳೆಗೆ ಉಪಯೋಗಿಸಬಹುದು ಎನ್ನುವ ಉದ್ದೇಶದಿಂದ ಬಿಟ್ಟಿದ್ದಾರೆ. ಆದರೆ ಇದನ್ನು ಶಾಶ್ವತವಾಗಿ ಮಾಡುವುದಕ್ಕೆ ಆಗುವುದಿಲ್ಲ. Irrigation ಪೂರ್ತಿಯಾಗಿ ಡೆವಲಪ್ ಆದಮೇಲೆ ನೀವು ಹೇಳುವಂಥ ಕೆರೆಗಳಿಗೆ ನೀರು ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಇದು ನಮ್ಮ ಎಸ್ಟಿಮೇಟ್ ಪ್ರಕಾರ ಇರತಕ್ಕಂಥ ಹಿನ್ನಲೆಯಿಂದ ಹೇಳಿರತಕ್ಕದ್ದು. ಇದು recognised achkat ಎಂದು ನಾವು ಕರೆಯುತ್ತೇವೆ. ಆದರೆ ನಿನ್ನೆ ನೀವು ಎಲ್ಲ ಬಂದು ಭೇಟಿ ಮಾಡಿದಮೇಲೆ ನಾನು ನೀರು ಆಲ್ಲಿ ಹಾಲಿ ಇರುವುದರಿಂದ ಈ ಒಂದು ಶಿಂಶಾ ಕೊಳ್ಳಕ್ಕೆ ಬಿಡಬೇಕೆಂದು ಹೇಳಿ ಆದೇಶ ಮಾಡಿದ್ದೇನೆ. ಈಗಾಗಲೇ 200 ಕ್ಯೂಸೆಕ್ಸ್ ನೀರನ್ನು ಶಿಂಸಾ ಕೊಳ್ಳಕ್ಕೆ ಬಿಟ್ಟು ನೀರು ಹರಿಯುತ್ತಿದೆ. ಬಹುಶಃ ಆ ಕೆರೆಗಳನ್ನು ಈ ಸಲ ತಾತ್ಕಾಲಿಕವಾಗಿ ತುಂಬಿಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ಶ್ರೀ ಎಸ್.ಪಿ. ಮುದ್ದಹನುಮಗೌಡ:- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾವಿರ ಸಂಖ್ಯೆಯಲ್ಲಿ ಬಂದ ಕುಣಿಗಲ್ ತಾಲ್ಲೂಕಿನ ರೈತರ ಮನವಿಗೆ ನೇರವಾಗಿ ಸ್ಪಂದಿಸಿ ನೀರನ್ನು ಈ ದಿವಸ ಹೇಮಾವತಿ ಜಲಾಶಯದಿಂದ ಶಿಂಶಾ ಕೊಳ್ಳಕ್ಕೆ ಬಿಡುವುದಕ್ಕೆ ಏನು ಆದೇಶವನ್ನು ಕೊಟ್ಟಿದ್ದಾರೆ, ಅದಕ್ಕಾಗಿ ನಾನು ತುಮಕೂರು ಜಿಲ್ಲೆಯ ರೈತರ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಆದರೆ ಈ ಸಂದರ್ಭದಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುವುದಕ್ಕೆ ಇಚ್ಚೆ ಪಡುತ್ತೇನೆ. ಈಗ ಆ ಜಲಾಶಯದಲ್ಲಿ ಏನು ಅಲ್ಪ ಸ್ವಲ್ಪ ನೀರಿದೆ, ಅದನ್ನು ತಕ್ಷಣದಿಂದ ಬಿಟ್ಟರೆ, ಏಕೆಂದರೆ, ನೀರು ಬಿಟ್ಟು ಈ ಎಲ್ಲ ಕೆರೆಗಳು ತುಂಬುವುದಕ್ಕೆ ಸಾಕಷ್ಟು ಸಮಯ ಬೇಕಾಗುತ್ತದೆ. ಆದ್ದರಿಂದ ತಕ್ಷಣ ಬಿಡುವುದಕ್ಕೆ ಆದೇಶ ನೀಡಿದರೆ ಈಗ ಅವರು ಬೆಳೆಯನ್ನು ರಕ್ಷಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈಗ ಇರತಕ್ಕಂಥ ಅಲ್ಪ ಸ್ವಲ್ಪ ನೀರನ್ನು ತಕ್ಷಣ ಬಿಡುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶವನ್ನು ನೀಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ:- ನಾನು ನಿನ್ನೆ ನಿಮ್ಮ ಎದುರಿಗೇ ಹೇಳಿದ್ದೇನೆ. ಆದ್ದರಿಂದ ನೀರು ಬಿಡುವ ಬಗ್ಗೆ ಯೋಚನೆ ಇಲ್ಲ. ಇನ್ನೂರು ಕ್ಯೂಸೆಕ್ಸ್ ನೀರು ಹೋಗುತ್ತಿದೆ ಮತ್ತು ಈಗ ಇರತಕ್ಕಂಥ ಬೆಳೆಯನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ನೀರು ಇದೆ. ಇದರ ಬಗ್ಗೆ ಜಿಜ್ಞಾಸೆ ಬೇಡ. ನಾನು ಇಷ್ಟು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚಿಪಡುತ್ತೇನೆ. ನಾಳೆ ಎಲ್ಲ ನಾಲೆ ಕೆಲಸ ಮುಗಿದಮೇಲೆ, ನಿಮ್ಮ ರೈತರಿಗೆ ನೀವು ಅರ್ಥಮಾಡಿಕೊಡಬೇಕು. ಈ ಕೆರೆಯನ್ನು ತುಂಬತಕ್ಕಂಥ ಕೆಲಸ ಬರುವ ನೀರಿನಲ್ಲಿ ಆಗುವುದಿಲ್ಲ. ಹೋದಸಾರಿ ಬೆಳೆಯನ್ನು ಉಳಿಸಿಕೊಳ್ಳೋಣವೆಂಬ ಹಿನ್ನಲೆಯಲ್ಲಿ ಬಿಟ್ಟಿದ್ದೇವೆ. ನಿರು ಬಿಡುವುದಕ್ಕೆ ನಾನು ನಿನ್ನೆಯೇ ಒಪ್ಪಿಕೊಂಡೆ. ಆದ್ದರಿಂದ ನಾನು ಇಷ್ಟೆ ಹೇಳುತ್ತೇನೆ. ನಾಲ್ಕು ದಿನಗಳಿಂದ ನಮ್ಮ ಈ ಸಭೆಯಲ್ಲಿ ಗೊಂದಲವಾಯಿತು. ಈಗ ಸಾಕಷ್ಟು ನೀರು ಆಲ್ಲಿ ಬಂದಿರುವುದರಿಂದ ಎಲ್ಲೆಲ್ಲಿ ನೀರು ತುಂಬಿಸುವುದಕ್ಕೆ ಸಾಧ್ಯವಿದ್ದರೆ ತುಂಬಿಸಿಕೊಳ್ಳಿ.

ಶ್ರೀ ಆರ್.ನಾರಾಯಣ್ (ಬೆಳ್ಳಾವಿ):- ಮಾನ್ಯ ಸಭಾದ್ಯಕ್ಷರೇ, ನಾನು ಮೊದಲು ತಮಗೆ ಅಭಿನಂದನೆಯೆನ್ನು ಸಲ್ಲಿಸಬೇಕಾಗುತ್ತದೆ. ಏಕೆಂದರೆ ತ್ಞಾವು ಕಾರ್ಯಕಲಾಪಗಳ ಪಟ್ಟಿಯಲ್ಲಿ ಐದು ದಿವಸಗಳಿಂದ ಇದನ್ನು ಮುಂದುವರೆಸಿಕೆಂಡು ಬಂದಿದ್ದೀರಿ. ಇದರ ಸಂಬಂಧವಾಗಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಖಚಿತವಾದ ಉತ್ತರವನ್ನು ಕೊಟ್ಟಿರುವುದಕ್ಕೆ ರೈತಬಾಂಧವರ ಪರವಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಟ್ರಯಲ್ ಅಂಡ್ ಎರರ್ ಅಂತ ಮಾಡಿ ಮಾನ್ಯ ಶ್ರೀ ವೀರಪ್ಪ

ಮೊಯಿಲಿಯವರ ಕಾಲದಲ್ಲಿ ನೀರು ಬಿಟ್ಟರೀತಿಯಲ್ಲಿ ಇದನ್ನು ತಾತ್ಕಾಲಿಕವಾಗಿ ಜಾರಿಯಾಗತಕ್ಕಂಥ. ಕೆಲಸ ಮಾಡಿ 50-60 ಸಾವಿರ ಎಕರೆಗೆ ನೀರು ಕೊಡತಕ್ಕಂಥ ಮುಖ್ಯಮಂತ್ರಿಗಳ ನಿಲುವನ್ನು ರೈತರ ಪರವಾಗಿ ಮತ್ತು ಶಾಸಕರ ಪರವಾಗಿ ಸ್ವಾಗತ ಮಾಡಿ ಅವರಿಗೂ ಮತ್ತು ತಮಗೂ ಸಹ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರಿಗೂ ಕೃತಜ್ಞತೆ ಅರ್ಪಿಸುತ್ತೇನೆ; ಏಕೆಂದರೆ ಅವರಿಂದಾಗಿ ಇದೊಂದು ಪ್ರಿಸಿಡೆಂಟ್ ಆಯಿತು. ತಾತ್ಕಾಲಿಕವಾದರೂ ಟ್ರಯಲ್ ಮೂಡಿ ರೈತರ ಪರಿಸ್ಥಿತಿಯನ್ನು ಅರಿತುಕೊಂಡು, ಅವರ ಕಷ್ಟಕ್ಕೆ ಸ್ಪಂದಿಸಿರುವುದಕ್ಕೆ ಮತ್ತು ಐವತ್ತು ಸಾವಿರ ಎಕರೆಗೆ ಉಪಯೋಗವಾಗುವುದಕ್ಕೆ ನೀರು ಬಿಟ್ಟಿರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ತಮಗೆ ಹಾಗೂ ಮಾನ್ಯ ವೀರಪ್ಪ ಮೊಯಿಲಿಯವರಿಗೆ ಶಾಸಕರ ಪರವಾಗಿ ಮತ್ತು ರೈತರ ಪರವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಅಭಿನಂದನೆ ಸಲ್ಲಿಸಿದ್ದಾರೆ, ನನ್ನ ಅಭಿಪ್ರಾಯವೂ ಅದೇ. ಆದರೆ ಒಂದು ಆಕ್ಷೇಪ, ತಮ್ಮ ಹೇಳಿಕೆಯಿಂದ ನನಗೇನಾಯಿತೆಂದರೆ, ಅಧಿಕೃತ ಮತ್ತು ಅನಧಿಕೃತ ಅಚ್ಚುಕಟ್ಟಿನ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ನಾನು ಹೇಳತಕ್ಕಂತಾದ್ದು, ಈಗ ನದಿಗಳು ತುಂಬಿ ಹರಿಯುತ್ತಿದ್ದು, ಸಾಕಷ್ಟು ನೀರು ಹರಿದುಹೋಗುತ್ತಾ ಇದೆ. ನಮ್ಮ ವ್ಯಾಪ್ತಿ ಇರತಕ್ಕಂತಾದ್ದು 205 ಟಿ.ಎಂ.ಸಿ. ಆದಮೇಲೆ ಹೆಚ್ಚುವರಿ ನೀರು ಇದೆಯಲ್ಲ, ಅದನ್ನು ಕಮ್ಯಾಂಡ್ ಏರಿಯಾದಲ್ಲಿ ಬರತಕ್ಕಂಥ ಅನಧಿಕೃತ ಅಚ್ಚುಕಟ್ಟಿಗೂ ನೀರು ಕೊಡಬೇಕಾಗುತ್ತದೆ. ಅದು ಎಸ್ಕೇಪ್ ಚಾನಲ್ ಆಗಬಹುದು ಅಥವಾ ಯಾವುದೇ ಆಗಬಹುದು.ಇಲ್ಲಿ ಹೆಚ್ಚುವರಿಯಾಗಿ ಹೋಗತಕ್ಕ ನೀರಿಗೆ ಯಾವುದೇ ರೀತಿಯ ರಿಸರ್ವೇಷನ್ ಇರಬಾರದೆಂಬ ಬಗ್ಗೆ ಹೇಳುತ್ತಿದ್ದೇನೆ. ಅಲ್ಲಿ ಬರತಕ್ಕ ಗಂಗನಘಟ್ಟ ಕೆರೆ, ಮಾರ್ಕೋನಹಳ್ಳಿ ಕೆರೆ ಈ ಯಾವ ಕೆರೆಗಳಲ್ಲೂ ನೀರು ಇಲ್ಲ. ಕುಡಿಯುವುದಕ್ಕೂ ನೀರು ಇಲ್ಲದೇ ಇರತಕ್ಕ ಪರಿಸ್ಥಿತಿ ಇರುವುದರಿಂದ, ದಯಮಾಡಿ ಏನು ಹೆಚ್ಚುವರಿಯಾಗಿ, ನಿಗದಿ ಮಾಡಿರುವುದಕ್ಕಿಂತ ಹೆಚ್ಚು ನೀರು ತಮಿಳುನಾಡಿಗೆ ಹೋಗುತ್ತಿದೆ ಆ ನೀರನ್ನು ಸಂಪೂರ್ಣವಾಗಿ ಬಳಕೆ ಮಾಡಿ, ಅನ್ ಆಥರೈಸ್ಡ್ ಅಚ್ಚುಕಟ್ಟಿಗೆ ಕೊಡುತ್ತೇವೆನ್ನುವುದರ ಬಗ್ಗೆ ಆಶ್ವಾಸನೆ ಕೊಡಬೇಕು ಮತ್ತು ಆ ಕೆರೆಗೆ ಬೇಕಾಗಿರತಕ್ಕಂಥಾದ್ದು 2 ಟಿ.ಎಂ.ಸಿ ನೀರು ಮಾತ್ರ, ಅದಕ್ಕಿಂತ ಜಾಸ್ತಿ ಬೇಕಾಗುವುದಿಲ್ಲ ಈ ರೀತಿ ಹೆಚ್ಚುವರಿಯಾಗಿ ಹರಿದುಹೋಗತಕ್ಕ ಸಂದರ್ಭದಲ್ಲಿ, ತಾವು ನೀರು ಕೊಡುತ್ತೇವೆ ಎನ್ನುವುದನ್ನು ಹೇಳಬೇಕು. ಅದು ಆಥರೈಸ್ಡ್ ಆಗಲೀ ಅನ್ ಆಥರೈಸ್ಡ್ ಆಗಲಿ ಕೊಟ್ಟೇ ಕೊಡುತ್ತೇವೆ ಎನ್ನತಕ್ಕ ಕಳಕಳಿಯನ್ನು ದಯಮಾಡಿ ತಾವು ಇಲ್ಲಿ ಎಕ್ಸ್‌ಪ್ರೆಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಶಿಂಶಾ ಕಣಿವೆಗೆ ನೀರು ಬಿಡತಕ್ಕಂತಾದ್ದರ ಬಗ್ಗೆ ಹಿಂದಿನ ಸರ್ಕಾರದವರು ಏನು ನಿರ್ಣಯ ಮಾಡಿದ್ದಾರೆ, ಅದನ್ನು ತಾತ್ಕಾಲಿಕವಾಗಿ ಈ ವರ್ಷವೂ ಮುಂದುವರಿಸುತ್ತೇವೆ. ಆದರೆ, ಆ ಭಾಗದ ಸನ್ಮಾನ್ಯ ಸದಸ್ಯರು ಇದನ್ನು ಖಾಯಂಗೊಳಿಸಬೇಕೆಂಬ ಶಬ್ಧವನ್ನು ಏನು ಪ್ರಯೋಗ ಮಾಡುತ್ತಿದ್ದಾರೆ, ಆ ರೀತಿ ಹೇಳುವುದಕ್ಕೆ ಕಷ್ಟವಾಗುತ್ತದೆ ಮತ್ತು ಆ ರೀತಿ ಹೇಳುವುದಕ್ಕಾಗುವುದಿಲ್ಲ. ಲೋ ಇರಿಗೇಷನ್‌ಗೆ ಸುಮಾರು 3 ಲಕ್ಷ ಎಕರೆಗೆ ತುಮಕೂರು ಜಿಲ್ಲೆಯವರಿಗೆ ನೀರು ಒದಗಿಸಿ. ಅದು ಪರಿಪೂರ್ಣವಾದ ಮೇಲೆ ನೀರು ಉಳಿದರೆ, ಆಗ ಈ ತರಹ ಅನಧಿಕೃತವಾಗಿ ಕೆರೆಗಳಿಗೆ ನೀರು ಕೊಡತಕ್ಕಂತಾದ್ದರ ಬಗ್ಗೆ ಪ್ರಯತ್ನ ಮಾಡಬಹದು. ಆದರೆ, ನಾನು ಈಗಲೇ ಕಮಿಟ್ ಮಾಡಿಕೊಂಡರೆ, ನಾಳೆ ಅಲ್ಲಿಯ ಜನರಿಂದ ಸಂಘರ್ಷವಾಗುತ್ತದೆ. ನಮ್ಮಲ್ಲೇ ರಾಗಿ ಬೆಳೆಯಬೇಕೆಂದರೆ, ಭತ್ತ ಬೆಳೆದುಕೊಂಡಿದ್ದಾರೆ. ನಾಳೆ ಭತ್ತ ಬೆಳೆಯುವುದನ್ನು ಬಿಟ್ಟು ನಮ್ಮ ಜಿಲ್ಲೆಯಲ್ಲಿ ಕಬ್ಬು ಬೆಳೆಯುವುದಕ್ಕೆ ಶುರುಮಾಡಿದರೆ ನೀರು

ಬರುವುದೇ ಇಲ್ಲ. ಇದರ ಹಣೆಬರಹ ನಮ್ಮೆಲ್ಲರಿಗೂ ಗೊತ್ತಿದೆ. ಇದು ನಿಮ್ಮೊಬ್ಬರಿಗೇ ಅಲ್ಲ, ಎಲ್ಲರಿಗೂ ಗೊತ್ತಿರುವುದೇ. ಇದರ ಬಗ್ಗೆ ಕ್ಯಾಪಿಂಗ್ ಪ್ಯಾಟ್ರನ್‌ನ್ನು, ಡ್ಯಾಮ್‌ಗಳು ಪೂರ್ಣವಾದ ಮೇಲೆ, ಒಂದುಕಡೆ ಅಲ್ಲ, ಎಲ್ಲಾ ಕಡೆ ಎನ್‌ಫೋರ್ಸ್ ಮಾಡಬೇಕಾಗುತ್ತದೆ. ಸದನದಲ್ಲಿ ಎಲ್ಲರೂ ಕುಳಿತುಕೊಂಡು, ಒಂದು ನಿರ್ಣಯಕ್ಕೆ ಬಂದು ಎನ್‌ಫೋರ್ಸ್ ಮಾಡಬೇಕಾಗುತ್ತದೆ. ನೀರನ್ನು ಯಾರೋ ಒಬ್ಬರು ಉಪಯೋಗ ಮಾಡಿಕೊಂಡು, ಬೇರೆಯವರಿಗೆ ಟೋಪಿ ಹಾಕುವುದಕ್ಕಾಗುವುದಿಲ್ಲ. We may have to take certain radical steps but only thing is that the entire house has to stand together on that issue. ಈಗ ಅನಧಿಕೃತವಾಗಿರುವುದಕ್ಕೆ, ನಾನು ಮುಂದೆ ಮಾನ್ಯ ಮಾಡುತ್ತೇನೆಂದು ಹೇಳುವುದು ಕಷ್ಟವಾಗುತ್ತದೆ. ಈಗಂತು ನೀರು ಬಿಟ್ಟಿದ್ದೇವೆ. ಹಿಂದಿನ ವರ್ಷ ಏನು ಸಹಾಯ ಮಾಡಿದ್ದರೋ, ಅದೇ ಸಹಾಯವನ್ನು ಈ ವರ್ಷವೂ ಮಾಡುತ್ತೇವೆ.

ನಿಯಮ 351ರ ಮೇರೆಗೆ ಚರ್ಚೆ

ವಿಷಯ:- ಬೆಂಗಳೂರು ನಗರದಲ್ಲಿ, ಒಕ್ಕಲೆಬ್ಬಿಸಿ ಬೀದಿ ಪಾಲಾದ ಫಲಾನುಭವಿಗಳಿಗೆ ನಿವೇಶನ ಹಂಚದಿರುವ ಬಗ್ಗೆ.

ಶ್ರೀ ಜಿ.ಎಸ್.ಶಿವನಂಜಪ್ಪ (ಗುಬ್ಬಿ):- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಮಳೆಯಿಂದಾಗಿ, ಮತ್ತು ವಿವಿಧ ಬಡಾವಣೆಗಳ ನಿರ್ಮಾಣಕ್ಕಾಗಿ ಒಕ್ಕಲೆಬ್ಬಿಸಿದಾಗ ಬೀದಿಪಾಲಾದ ಅರ್ಹ ಫಲಾನುಭವಿಗಳ ಪರವಾಗಿ ''ಕರ್ನಾಟಕ ದಲಿತ ಕ್ರಿಯಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಅಪ್ಪುರಾವ್ ಗುಲ್ವಾಡಿಯವರು ಒದಗಿಸಿರುವ ಅನೇಕ ದಾಖಲೆಗಳು ದಿನಾಂಕ : 26-10-93ರಂದು ಇವುಗಳ ಸರ್ಕಾರಕ್ಕೆ ಸೇರಿರುವುದಾಗಿಯೂ ತಾ : 15-2-94ರಲ್ಲಿ ಸದನದಲ್ಲಿ, ಸರ್ಕಾರವು ಒಪ್ಪಿಕೊಂಡಿದ್ದರು ಕೂಡ ಸಮಿತಿಯು ಸಲ್ಲಿಸರುವ 10 ಬೇಡಿಕೆಗಳಲ್ಲಿ ಸುಮಾರು 10,058 ನಿರ್ವಸಿತ ಬಡ ಕುಟುಂಬಗಳಿಗೆ 20 X 30 ಅಳತೆಗೆ ಬದಲೀ ನಿವೇಶನಗಳನ್ನು ಪುನರ್ವಸತಿ ಯೋಜನೆಯಡಿ ಹಂಚದಿರುವ ಬಗ್ಗೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಶೀಘ್ರವಾಗಿ ಇವರುಗಳಿಗೆ ನಿವೇಶನಗಳನ್ನು ಮಂಜೂರ್ಮಾಡುವುದಾಗಿಯೂ ಪುನಃ ತಾ: 15-2-94 ರಲ್ಲಿ ಮತ್ತು 17-2-94 ರಂದು ಕೂಡ ಉಭಯ ಸದನಗಳಲ್ಲಿ ನೀಡಿರುವ ಸರ್ಕಾರದ ಈ ಭರವಸೆಗಳು ಇಂದಿಗೂ ಕಾರ್ಯರೂಪಕ್ಕೆ ಬಾರದೆಯೇ ಇರುವ ಕುರಿತು ಹಾಗೂ ಈ ಪ್ರಕರಣವನ್ನು ಪರಿಗಣಿಸಿ 8 ದಿನಗಳಲ್ಲಿ ಇತ್ಯರ್ಥಗೊಳಿಸುವಂತೆ ಕ್ರಮವಾಗಿ ದಿನಾಂಕ: 15-2-95 ಹಾಗೂ 10-7-95 ಮತ್ತು 13-7-95 ರಂದು ಸ್ವತಃ ಮುಖ್ಯ ಮಂತ್ರಿಯವರೇ ಹೊರಡಿಸಿರುವ ಈ ಆದೇಶಗಳು ಸಹ ಜಾರಿಗೆ ಬಾರದಿರುವ ಕಾರಣ ಸಾರ್ವಜನಿಕ ಮಹತ್ವವಾದ ಈ ವಿಷಯದ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಆರ್.ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ರಾಜ್ಯ ಸಚಿವರು):- ಮಾನ್ಯ ಸದಸ್ಯರು ಸೂಚನೆಯಲ್ಲಿ ತಿಳಿಸಿರುವಂತೆ ದಲಿತ ಕ್ರಿಯಾ ಸಮಿತಿಯ ರಾಜ್ಯ ಸಂಚಾಲಕರಾದ ಶ್ರೀ ಅಪ್ಪುರಾವ್ ಗುಲ್ವಾಡಿಯವರು ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ ಮನೆ ಕಳೆದುಕೊಂಡವರೆನ್ನಲಾದ ಸುಮಾರು 10,058 ಕೊಳಚೆ ನಿವಾಸಿಗಳಿಗೆ ಪುನರ್ ವಸತಿ ನೀಡುವಂತೆ ಕೋರಿಕೆ ಸಲ್ಲಿಸಿರುವುದು ನಿಜ.

ಜಾರಿಯಲ್ಲಿರುವ ಪ್ರಾಧಿಕಾರದ ಹಂಚಿಕೆ ನಿಯಮಗಳ ಪ್ರಕಾರ ಬಿಡಿನಿವೇಶನಗಳ ಹಂಚಿಕೆ ಹೊರತುಪಡಿಸಿ, ಉಳಿದಂತೆ ಅಧಿಸೂಚನೆ ಹೊರಡಿಸಿ, ಅರ್ಜಿಗಳನ್ನು ಆಹ್ವಾನಿಸಿ, ನಂತರ